## ಪುರಂದರದಾಸರ ಕೀರ್ತನೆಗಳಿಂದ

ನಾನೇಕೆ ಪರದೇಶಿ ನಾನೇಕೆ ಬಡವನು
ನೀನಿರುವ ತನಕ ಶ್ರೀನಿಧೇ ಹರಿ ಎನಗೆ
ಪುಟ್ಟಿಸಿದ ತಾಯ್ತಂದೆ ಇಷ್ಟಮಿತ್ರನು ನೀನೆ
ಅಷ್ಟಬಂಧು ಬಳಗ ಸರ್ವ ನೀನೆ
ಪೆಟ್ಟಿಗೆಯೊಳಗಿನ ಅಷ್ಟಾಭರಣ ನೀನೆ
ಶ್ರೇಷ್ಠ ಮೂರುತಿ ಕೃಷ್ಣ ನೀನಿರುವ ತನಕ
ಒಡಹುಟ್ಟಿದವ ನೀನೆ ಒಡಲಿಗ್ಹಾಕುವ ನೀನೆ
ಉಡಲು ಹೊದಿಯಲು ವಸ್ತ್ರ ಕೊಡುವ ನೀನೆ
ಮಡದಿ ಮಕ್ಕಳನೆಲ್ಲ ಕಡಹಾಯಿಸುವ ನೀನೆ
ಬಿಡದೆ ಸಲಹುವ ಒಡೆಯ ನೀನಿರುವ ತನಕ
ವಿದ್ಯೆ ಹೇಳುವ ನೀನೆ ಬುದ್ಧಿ ಕಲಿಸುವ ನೀನೆ



ಉದ್ಧಾರ ಕರ್ತ ಮಮ ಸ್ವಾಮಿ ನೀನೆ
ಮುದ್ದು ಪುರಂದರ ವಿಠ್ಠಲ ನಿನ್ನಡಿ ಮೇಲೆ
ಬಿದ್ದುಕೊಂಡಿರುವ ನನಗ್ಯಾತರ ಭಯವೊ

ಕೊಡು ಕಂಡ್ಯ ಹರಿಯೆ ನಿನ್ನ ನಾಮ
ಕೊಡು ಕಂಡ್ಯ ಹರಿಯೆ
ಕಾಡಲಿಲ್ಲ ಹರಿಯೆ ಬಡವನೆಂದು ನಿನ್ನ
ಒಡಲು ತುಂಬದು ಎಂದು ಬಳಲಿ ನಾ ಬರಲಿಲ್ಲ
ಸಡಗರದಿಂ ಭಾಗ್ಯ ಬೇಡಲಿಲ್ಲ
ಮಡದಿ ಮಕ್ಕಳಿಗಾಗಿ ಕಡುಮೋಹ ಎನಗಿಲ್ಲ
ಬಿಡದೆ ನಿನ್ನ ಸ್ಮರಣೆ ಕೊಡು ಒಂದೇ ಸಾಕು

## ಸರ್ವಜ್ಞನ ಸೂಕ್ತಿಗಳು

ತೆರೆದ ಹಸ್ತವು ಲೇಸು ಹಿರಿದು ಪೂಜೆಯು ಲೇಸು ।
ಅರಸೊಲಿಯೆ ಲೇಸು, ಸರ್ವಕು ಶಿವನಿಂಗೆ ।
ಶರಣವೇ ಲೇಸು ಸರ್ವಜ್ಞ ॥

ಖುಲ್ಲ ಮಾನವ ಬೇಡೆ ಕಲ್ಲು ತಾ ಕೊಡುವದೇ?।
ಸೊಲ್ಲರಿವ ಶಿವನ ಬೇಡಿದಡೆ ಬಯಸಿದು ।
ದೆಲ್ಲವನು ಕೊಡುವ ಸರ್ವಜ್ಞ ॥

ಆಗುಹೋಗುಗಳು ನೆರೆ ರಾಗಭೋಗಗಳು ಸ- ।
ರಾಗವಾಗಿಕ್ಕು ಶಿವನೊಲಿದಡಲ್ಲದಿರೆ ।
ಹೋಗಿಕ್ಕು ಕಾಣೊ ಸರ್ವಜ್ಞ ॥

ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು ।
ಎತ್ತು ಗಾಣವನು ಹೊತ್ತು ತಾ ನಿತ್ಯದಿ ।
ಸುತ್ತಿ ಬಂದಂತೆ ಸರ್ವಜ್ಞ ॥

ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು ।
ಮನದಲ್ಲಿ ನೆನೆಯದಿರುವವನು ದೇಗುಲದ ।
ಕೊನೆಯಲ್ಲಿದ್ದೇನು? ಸರ್ವಜ್ಞ ॥

ಮನೆಯೇನು ವನವೇನು । ನೆನಹು ಇದ್ದರೆ ಸಾಕು ।
ಮನಮುಟ್ಟಿ ಶಿವನ ನೆನೆಯದವನು ಬೆಟ್ಟದ ।
ಕೊನೆಯಲ್ಲಿದ್ದೇನು ? ಸರ್ವಜ್ಞ ॥

ಜಂಗಮಕೆ ವಂಚಿಸನು
ಹಿಂಗಿರನು ಲಿಂಗವನು ।
ಸಂಗ ಭಕ್ತರೊಳು
ಪರಸತಿಗೆ ಒಲಿಯದಗೆ ।
ಭಂಗವೇ ಇಲ್ಲ ಸರ್ವಜ್ಞ ॥

ತನುವನ್ನು ಗುರುವಿಂಗೆ
ಮನವನ್ನು ಲಿಂಗಕ್ಕೆ ।
ಧನವ ಜಂಗಮಕೆ
ವಂಚಿಸದ ಭಕ್ತಂಗೆ ।
ಅನಘಪದವಹುದು ಸರ್ವಜ್ಞ॥



ಭಕ್ತನ ಮನೆಯಲ್ಲಿ ಭಕ್ತಿಯಿಂದಿರಬೇಕು ।
ಭಕ್ತರು ಒಕ್ಕು ಮಿಕ್ಕುದನು ಕೊಂಬುವಗೆ ।
ಮುಕ್ತಿಯಹುದೆಂದ ಸರ್ವಜ್ಞ॥

ನೋಟ ಶಿವಲಿಂಗದಲಿ ಕೂಟ ಜಂಗಮದಲ್ಲಿ ।
ನಾಟಿದ ಮನವು ಗುರುವಿನಲಿ ಶರಣರ ।
ಮಾಟವನು ನೋಡ ಸರ್ವಜ್ಞ॥

(ಸಂಪಾದನೆ: ಚನ್ನಂಗಿ ಉತ್ತಪ್ಪ)



## 3 ದಿನಗಳ ಅಹೋಬಿಲಂ – ನವನರಸಿಂಹ ಪ್ರವಾಸ

**ಪ್ರಯಾಣ ದರದಲ್ಲಿ ಸೇರಿರುವ ಸೌಲಭ್ಯಗಳು:** ತಿಂಡಿ ಮತ್ತು ಊಟ – ವಸತಿ ಸೌಕರ್ಯ (ಹಾಲ್/ಡಾರ್ಮಿಟರಿ)2 x 2 ಸೀಟಿನ ಲಕ್ಸುರಿ ಬಸ್‌ನಲ್ಲಿ ಪ್ರಯಾಣ – ತೆರಿಗೆಗಳು ಮ್ಯಾನೇಜರ್ ಮತ್ತು ಮಾರ್ಗದರ್ಶಿ ದರಗಳು, ಪ್ರವಾಸ ವಿಮೆ

**ಪ್ರವಾಸ ಸ್ಥಳಗಳು:** ಜ್ವಾಲಾನರಸಿಂಹ, ಪಾವನನರಸಿಂಹ, ವರಹಾನರಸಿಂಹ, ಕಾರಂಜನರಸಿಂಹ, ಮಾಲೋಲನರಸಿಂಹ, ಯೋಗನರಸಿಂಹ, ಭಾರ್ಗವನರಸಿಂಹ, ಛತ್ರವಟನರಸಿಂಹ, ಉಗ್ರನರಸಿಂಹ ಹಾಗೂ ಪ್ರಹ್ಲಾದವರದ ಶ್ರೀ ಲಕ್ಷ್ಮೀನರಸಿಂಹ (ಕೆಳಗಿನ ಅಹೋಬಿಲಂ)



## 16 ದಿನಗಳ ಗುಜರಾತ್ – ರಾಜಸ್ಥಾನ ವಿಶೇಷವಾಗಿ ಪಂಚ ದ್ವಾರಕಾ ಮತ್ತು ಜ್ಯೋತಿರ್ಲಿಂಗ ದರ್ಶನ ಯಾತ್ರೆ


**ಹೊರಡುವ ದಿನಾಂಕ :** 2ನೇ ಫೆಬ್ರವರಿ 2012

**ಪ್ರವಾಸ ದರದಲ್ಲಿ ಸೇರಿರುವ ಸೌಲಭ್ಯಗಳು :**

ಬೆಂಗಳೂರು – ಜೈಪುರ – ಅಹಮದಾಬಾದ್ – ಬೆಂಗಳೂರು

2ನೇ ದರ್ಜೆಯ ಸ್ಲೀಪರ್ ಕೋಚ್ ರೈಲಿನ ದರ, ತಿಂಡಿ ಮತ್ತು ಊಟ, 2 x 2 ಸೀಟಿನ ಲಕ್ಸುರಿ ಬಸ್ಸಿನಲ್ಲಿ ಪ್ರಯಾಣ, ವಸತಿ ಸೌಕರ್ಯ, ಮ್ಯಾನೇಜರ್ ಮತ್ತು ಮಾರ್ಗದರ್ಶಿಯ ದರಗಳು

**ಪ್ರವಾಸ ಸ್ಥಳಗಳು :** ಜೈಪುರ, ಗುಜರಾತ್, ಪುಷ್ಕರ, ಕನಕ್ರೋಲಿ, ನಾಥದ್ವಾರ, ಉದಯಪುರ, ಅಬು ಪರ್ವತ, ಶಕ್ತಿಪೀಠ, ಅಂಬಾಜಿ, ಮಾತೃಗಯಾ, ಸನ್ ಟೆಂಪಲ್, ದ್ವಾರಕಾ, ಸೋಮನಾಥ, ಕೃಷ್ಣ ಕುಟೀರ ಹಾಗೂ ಇತರೆ.



## 15 ದಿನಗಳ ಮುಕ್ತಿನಾಥ ಯಾತ್ರೆ

**ಹೊರಡುವ ದಿನಾಂಕ :** 5ನೇ ಏಪ್ರಿಲ್ 2012 (ಬೆಂಗಳೂರಿನಿಂದ ಬೆಂಗಳೂರಿಗೆ)

**ಪ್ರವಾಸ ದರದಲ್ಲಿ ಸೇರಿರುವ ಸೌಲಭ್ಯಗಳು :**

ಬೆಂಗಳೂರು – ದೆಹಲಿ–ಬೆಂಗಳೂರು 2ನೇ ದರ್ಜೆಯ ಸ್ಲೀಪರ್ ಕ್ಲಾಸ್ ರೈಲಿನ ದರ, ಪೋಕರಾ – ಜಾಮಸಮ್ – ಪೋಕರಾ ವಿಮಾನ ದರ, ಜಾಮಸಮ್ – ಮುಸತಾಂಗ್ – ಜಾಮಸಮ್ ಜೀಪ್, ತಿಂಡಿ, ಬೆಳಗಿನ ಮತ್ತು ರಾತ್ರಿಯ ಊಟ, ವಸತಿ ಸೌಕರ್ಯ, 2 x 2 ಸೀಟಿನ ಲಕ್ಸುರಿ ಬಸ್‌ನಲ್ಲಿ ಪ್ರಯಾಣ, ಮ್ಯಾನೇಜರ್ ಮತ್ತು ಗೈಡಿನ ದರಗಳು

**ಪ್ರವಾಸ ಸ್ಥಳಗಳು :** ದೆಹಲಿ, ನೈಮಿಷಾರಣ್ಯ, ಅಯೋಧ್ಯಾ, ಸನೋಲಿ, ಪೋಕರಾ, ಜೋಮಸಮ್, ಮುಕ್ತಿನಾಥ, ಮನೋಕಾಮನಾ, ಕಠ್ಮಂಡು, ಪಶುಪತಿನಾಥ, ಜಲನಾರಾಯಣ, ಕಾಶಿ, ಗೋರಕ್‌ನಾಥ್ ಮಂದಿರ್ ಹಾಗೂ ಇತರೆ.



## 6 ದಿನಗಳ ಶ್ರೀಲಂಕಾ ಪ್ರವಾಸ (ರಾಮಾಯಣ ಕಾಲದ ಸ್ಥಳ ವೀಕ್ಷಣೆ)

**ಹೊರಡುವ ದಿನಾಂಕ :** 9ನೇ ಮತ್ತು 23ನೇ ಜನವರಿ, 2012

**ಪ್ರವಾಸ ದರದಲ್ಲಿ ಸೇರಿರುವ ಸೌಲಭ್ಯಗಳು :** ಬೆಂಗಳೂರು – ಶ್ರೀಲಂಕಾ – ಬೆಂಗಳೂರು ವಿಮಾನ ದರ, ಇಬ್ಬರು ಅಥವಾ ಮೂರು ಜನರು ಉಳಿದುಕೊಳ್ಳಲು 3 ಸ್ಟಾರ್ ಹೋಟೆಲ್‌ಗಳು. 2 x 2 ಸೀಟಿನ ಬಸ್‌ನಲ್ಲಿ ಪ್ರಯಾಣ (ವೋಲ್ವೋ, ಹವಾನಿಯಂತ್ರಿತ). ತಿಂಡಿ, ಮಧ್ಯಾಹ್ನದ ಮತ್ತು ರಾತ್ರಿಯ ಭೋಜನ. ಸ್ಥಳೀಯ ಮ್ಯಾನೇಜರ್ ಮತ್ತು ಗೈಡಿನ ದರ

**ಪ್ರವಾಸ ಸ್ಥಳಗಳು:** ಕೋಲಂಬೊ, ನೆಗೆಂಬೊ, ಮನಾವರಿ, ಲಿಂಗರಾಜ ಮಂದಿರ, ಬೌದ್ಧ ಮಂದಿರ, ಕ್ಯಾಂಡಿ, ಡಾಂಬುಲಾ, ಗೋಲ್ಡನ್ ಟೆಂಪಲ್, ಸೀತಾ ಅಶೋಕವನ, ರಾವಣ ಜಲಪಾತ, ಬೋಟಾನಿಕಲ್ ಉದ್ಯಾನವನ, ಹನುಮಾನ್ ದೇವಸ್ಥಾನ, ಬಾಲಾಜಿ ದೇವಸ್ಥಾನ, ಗಾಯತ್ರಿ ಪೀಠ, ನ್ಯುರೇಲಿಯಾ, ಟೀ ಫ್ಯಾಕ್ಟರಿ, ಬೀಚ್, ಮುತ್ತು ಮಾರಿಯಮ್ಮ ದೇವಿ ದೇವಸ್ಥಾನ, ಶ್ರೀಲಂಕಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಇತರೆ.


**ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್**

**Orchid Travel & Tours**

Recognised by Karnataka Tourism Govt. of Karnataka

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಿಂದ ಅಂಗೀಕರಿಸಲಾಗಿದೆ

**Tel : 26670646, 26621983, 26670647, 26617178**

**Mobile : 9886188867 / 9741523713 / 9945103900**

# 98, 1st Floor, D.V.G. Road,
Basavanagudi, (Near Sai Gold Palace)
Bangalore - 560 004.
E-mail : orchid.traveltours@gmail.com
www.orchidtravels.net

# ಪ್ರಾಯೋಗಿಕ ಆಧ್ಯಾತ್ಮಿಕತೆ

**ಆ**ಧ್ಯಾತ್ಮಿಕ ಜೀವನವು ಕತ್ತಿಯ ಅಲುಗಿನ ಮೇಲೆ ನಡೆದುಕೊಂಡು ಹೋಗುವಂತೆ ಕಷ್ಟಕರವಾದದ್ದು ಎಂದು ಕಠೋಪನಿಷತ್ತು ಹೇಳುತ್ತದೆ. ಹಾಗೆಯೇ ಈ ಮಾರ್ಗದಲ್ಲಿ ನಡೆಯುವಾಗ ಯಾವಾಗಲೂ ಎಚ್ಚರವಾಗಿರಬೇಕು ಎಂದೂ ಬೋಧಿಸುತ್ತದೆ.

**ತಾಂ ಯೋಗಮಿತಿ ಮನ್ಯಂತೇ ಸ್ಥಿರಾಮಿಂದ್ರಿಯಧಾರಣಾಮ್ ।**
**ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭವಾಪ್ಯಯೌ ॥** (ಕಠೋಪನಿಷತ್ತು, ೨: ೬: ೧೧)

"ಇಂದ್ರಿಯಗಳನ್ನು ಸ್ಥಿರವಾಗಿ ಇಟ್ಟುಕೊಂಡಿರುವುದನ್ನೇ 'ಯೋಗ' ಎಂದು ತಿಳಿದವರು ಹೇಳುತ್ತಾರೆ. ಅಂತಹ ಅವಸ್ಥೆಯಲ್ಲಿ ನೆಲೆಗೊಂಡಿರುವ ವ್ಯಕ್ತಿಯು ಪ್ರಮಾದವನ್ನು ಮಾಡುವುದಿಲ್ಲ. ಏಕೆಂದರೆ, ಯೋಗ ಹೇಗೆ ಉತ್ಪತ್ತಿ ಯಾಗುವುದೋ ಹಾಗೇ ಅದು ನಷ್ಟವಾಗಲೂಬಹುದು."

ಆಧ್ಯಾತ್ಮಿಕ ಜೀವನದಲ್ಲಿ ಈ 'ಪ್ರಮಾದ' ಅಥವಾ 'ತಪ್ಪುಮಾಡುವುದು' ಎನ್ನುವುದರಿಂದ ದೂರವಿರುವುದು ಅತ್ಯಂತ ಅವಶ್ಯವಾದುದು. **ಪ್ರಮಾದೋ ವೈ ಮೃತ್ಯುಃ** – ಪ್ರಮಾದವೆನ್ನುವುದು ಮೃತ್ಯುವಿಗೆ ಸಮಾನವಾದದ್ದು ಎಂದು ಶ್ರೀಶಂಕರಾಚಾರ್ಯರು ಹೇಳುತ್ತಾರೆ. ಶ್ರೀರಾಮಕೃಷ್ಣರೂ ಈ ವಿಷಯದಲ್ಲಿ ಸಾಧಕರಿಗೆ ಬಹಳವಾಗಿ ಎಚ್ಚರಿಕೆಯನ್ನು ಕೊಡುತ್ತಾರೆ: "ಹಳ್ಳಿಗಳ ಕಡೆ ಹೆಂಗಸರು ಒಂದರ ಮೇಲೆ ಒಂದರಂತೆ ನಾಲ್ಕೈದು ಕೊಡಗಳ ತುಂಬ ನೀರನ್ನು ಹೊತ್ತುಕೊಂಡು ಹೋಗುತ್ತಿರುತ್ತಾರೆ. ಅದಲ್ಲದೆ, ಒಬ್ಬರೊಡನೆ ಇನ್ನೊಬ್ಬರು ತಮ್ಮ ಸುಖದುಃಖಗಳ ಕಥೆಯನ್ನು ಮಾತ ನಾಡಿಕೊಳ್ಳುತ್ತ ನಡೆಯುತ್ತಿರುತ್ತಾರೆ. ಆದರೂ ಒಂದು ತೊಟ್ಟು ನೀರೂ ಚೆಲ್ಲದಂತೆ ನೋಡಿಕೊಳ್ಳುತ್ತಾರೆ. ಧರ್ಮದ ಹಾದಿಯಲ್ಲಿ ನಡೆಯುವವನೂ ಹಾಗೆಯೇ ಇರಬೇಕು. ಅವನು ಎಂತಹ ಸ್ಥಿತಿಯಲ್ಲಿದ್ದರೂ ಧರ್ಮದಿಂದ ದೂರವಾಗದಂತೆ ಜೋಪಾನವಾಗಿರಬೇಕು."

ಎಚ್ಚರದಿಂದ ಇರುವುದು ಹೇಗೆ? ನಮ್ಮ ಜೀವನದ ಕೇಂದ್ರಬಿಂದುವನ್ನಾಗಿ ಭಗವಂತನನ್ನು ಮಾಡಿಕೊಂಡಾಗ ಮಾತ್ರ ಅದು ಸಾಧ್ಯವಾಗುವುದು. ಇದನ್ನೇ ಶ್ರೀರಾಮಕೃಷ್ಣರು ಸ್ವಾರಸ್ಯವಾಗಿ ಹೀಗೆ ಹೇಳುತ್ತಾರೆ: "ಹುಡುಗನು ಕಂಬವನ್ನು ಹಿಡಿದುಕೊಂಡು, ತಾನು ಬೀಳುತ್ತೇನೆಂಬ ಅಂಜಿಕೆಯಿಲ್ಲದೆ ಹೇಗೆ ವೇಗವಾಗಿ ತಿರುಗುತ್ತಾನೋ ಹಾಗೆಯೇ ನಿಮ್ಮ ಮನಸ್ಸನ್ನೆಲ್ಲಾ ದೇವರ ಮೇಲೆ ಇಟ್ಟು ನಿಮ್ಮ ಪ್ರಾಪಂಚಿಕ ಕೆಲಸಗಳನ್ನು ಮಾಡಿ. ಆಗ ನೀವು ಅಪಾಯದಿಂದ ಪಾರಾಗುವಿರಿ." ನಮ್ಮ ವ್ಯವಹಾರದ ಕೆಲಸಕಾರ್ಯಗಳ ನಡುವೆ, ಪ್ರಲೋಭನೆಗಳು ಉಂಟಾಗುವ ಹತ್ತು ಹಲವು ಸ್ಥಳಗಳಿಗೆ ನಾವು ಹೋಗಬೇಕಾಗುವುದು. ಆಗೆಲ್ಲಾ ನಾವು ಭಗವಂತನನ್ನು ನೆನೆದುಕೊಂಡು, ಅವುಗಳಿಂದ ಪಾರುಮಾಡೆಂದು ಪ್ರಾರ್ಥಿಸಬೇಕೆಂದು ಶ್ರೀರಾಮಕೃಷ್ಣರು ಸಲಹೆ ನೀಡುತ್ತಾರೆ: "ಪ್ರಲೋಭನೆಗಳಿಂದ ಕೂಡಿದ ಸ್ಥಳಕ್ಕೆ ನೀನು ಹೋಗಲೇಬೇಕಾದಾಗ ಜಗನ್ಮಯಿಯನ್ನು ಯಾವಾಗಲೂ ಧ್ಯಾನಿಸು. ನಿನ್ನ ಮನಸ್ಸಿನಲ್ಲಿ ಹುದುಗಿಕೊಂಡಿರುವ ಹಲವು ಹೀನ ಆಲೋಚನೆಗಳಿಂದ ನಿನ್ನನ್ನು ಅವಳು ಪಾರುಮಾಡುವಳು. ಜಗನ್ಮಯಿಯ ಸಾನ್ನಿಧ್ಯದಲ್ಲಿ ಕೆಟ್ಟ ಆಲೋಚನೆ ಮತ್ತು ಹೀನ ಕೃತ್ಯ ಮಾಡಲು ನಾಚಿಕೆಯಾಗುವುದು."

ನಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಎದುರಾಗುವ ಹಲವಾರು ಎಡರುತೊಡರುಗಳನ್ನು ನಿವಾರಿಸಿಕೊಳ್ಳುವ ಬಗೆಯನ್ನು ಶ್ರೀರಾಮಕೃಷ್ಣರು ಸ್ವಾರಸ್ಯಕರವಾಗಿ ಅನೇಕ ಕಥೆಗಳು, ನಿದರ್ಶನಗಳ ಮೂಲಕ ನಮಗೆ ತೋರಿಸಿಕೊಡುವರು. ಅವುಗಳಲ್ಲಿ ಕೆಲವನ್ನು ಈಗ ನೋಡೋಣ:

**೧. ಇನ್ನೂ ಮುಂದೆ ಹೋಗುವುದು:** ಸ್ವಲ್ಪ ಕಾಲ ಆಧ್ಯಾತ್ಮಿಕ ಜೀವನವನ್ನು ನಡೆಸಿದರೆ, ಕೆಲವು ಸಿದ್ಧಿಗಳು ಉಂಟಾಗಬಹುದು. ಉದಾಹರಣೆಗೆ ಜಪಮಾಡುವಾಗ ಸ್ವಲ್ಪ ಆನಂದ ಸಿಗಬಹುದು. ಅದರಿಂದಲೇ ನಮಗೆ ಏನೇನು ಬೇಕೋ ಎಲ್ಲವೂ ದೊರೆತಿದೆ ಎಂದು ತಿಳಿದುಕೊಳ್ಳಬಾರದು. ಇದು ನಮ್ಮನ್ನು ತಪ್ಪುದಾರಿಗೆ ಒಯ್ಯುತ್ತದೆ. ನಾವು ಆಧ್ಯಾತ್ಮಿಕ ಜೀವನದಲ್ಲಿ ಉನ್ನತವಾದ ಸ್ತರಗಳಿಗೆ ಏರಲು ಇಚ್ಛಿಸುತ್ತಾ, ಅದಕ್ಕಾಗಿ ಪ್ರಯತ್ನ ಮಾಡುತ್ತಲೇ ಇರಬೇಕು. ಈ ವಿಷಯವನ್ನು ಶ್ರೀರಾಮಕೃಷ್ಣರು ಒಂದು ಸುಂದರವಾದ ಕಥೆಯ ಮೂಲಕ ವಿವರಿಸುತ್ತಾರೆ: ಒಬ್ಬ ಸೌದೆ ಮಾರುವವನು,

ಮರ ಕಡಿಯಲು ಕಾಡಿಗೆ ಹೋದನು. ಅಲ್ಲಿ ಒಬ್ಬ ಸಾಧುವನ್ನು ಕಂಡನು. ಆ ಸಾಧುವು ಅವನಿಗೆ "ಮುಂದೆ ಹೋಗು" ಎಂದು ಹೇಳಿದನು. ಆ ಮನುಷ್ಯ ಮುಂದೆ ಮುಂದೆ ಹೋದನು. ಅರಣ್ಯದ ಒಳಗೆ ಬಹು ದೂರ ಹೋದಾಗ, ಗಂಧದ ಮರಗಳು ಸಿಕ್ಕಿದವು. ಅವನ್ನು ಕಡಿದು, ಮಾರುಕಟ್ಟೆಯಲ್ಲಿ ಮಾರಿ, ಶ್ರೀಮಂತನಾದನು. ಸ್ವಲ್ಪದಿನಗಳಾದ ಮೇಲೆ ಅವನು ಯೋಚಿಸಿದನು, "ಆ ಸಾಧುಗಳು ನನಗೆ ಇನ್ನೂ ಮುಂದೆ ಹೋಗು ಎಂದಿದ್ದಾರಲ್ಲವೆ!" ಹಾಗೆಯೇ ಕಾಡಿಗೆ ಹೋಗಿ ಇನ್ನೂ ಮುಂದೆ ಹೋಗುತ್ತಾನೆ. ಆಗ ಒಂದು ನದೀತೀರದಲ್ಲಿ ಒಂದು ಬೆಳ್ಳಿಯ ಗಣಿಯನ್ನು ಅವನು ಕಂಡನು. ಇದನ್ನು ಅವನು ಕನಸಿನಲ್ಲೂ ಭಾವಿಸಿರಲಿಲ್ಲ. ಅವನು ಗಣಿಯಿಂದ ಬೆಳ್ಳಿಯನ್ನು ತೆಗೆದುಕೊಂಡು ಹೋಗಿ ಸಂತೆಯಲ್ಲಿ ಮಾರಿದ. ಆಗ ಅವನಿಗೆ ಎಷ್ಟು ಹಣ ಸಿಕ್ಕಿತು ಎಂದರೆ ಅದನ್ನು ಎಣಿಸುವುದಕ್ಕೂ ಅವನಿಗೆ ಸಮಯ ಸಿಗಲಿಲ್ಲ. ಇನ್ನೂ ಕೆಲವು ದಿನಗಳು ಕಳೆದವು. ಆ ವ್ಯಕ್ತಿಯು ಸಾಧುಗಳು ಹೇಳಿದ್ದನ್ನು ಮತ್ತೆ ನೆನಪಿಸಿಕೊಂಡನು, "ಸಾಧುಗಳು ಮುಂದೆ ಹೋಗು ಎಂದಿದ್ದಾರೆ." ಅವನು ಆ ಸ್ಥಳಕ್ಕಿಂತಲೂ ಮುಂದೆ ಹೋದನು. ಅಲ್ಲಿ ಅವನಿಗೆ ಒಂದು ಚಿನ್ನದ ಗಣಿ ಸಿಕ್ಕಿತು. "ಆದಕಾರಣವೇ ಸಾಧು ನನಗೆ ಮುಂದೆ ಮುಂದೆ ಹೋಗು ಎಂದಿದ್ದು" ಎಂದು ಅವನು ಉದ್ಗರಿಸಿದ. ಇನ್ನೂ ಸ್ವಲ್ಪ ದಿನಗಳು ಕಳೆದವು. ಆ ವ್ಯಕ್ತಿ ಇನ್ನೂ ಮುಂದೆ ಹೋದ. ಅಲ್ಲಿ ಅವನಿಗೆ ವಜ್ರ, ಪುಷ್ಯರಾಗ ಮುಂತಾದ ಬೆಲೆಬಾಳುವ ವಸ್ತುಗಳು ಸಿಕ್ಕಿದವು. ಅವುಗಳನ್ನೆಲ್ಲ ತೆಗೆದುಕೊಂಡು ಅವನು ದೇವತೆಗಳಿಗೆ ಸಮಾನವಾದ ಐಶ್ವರ್ಯವಂತನಾದ. ಈ ಕಥೆಯನ್ನು ಹೇಳಿ ಶ್ರೀರಾಮಕೃಷ್ಣರು ಹೀಗೆ ಬೋಧಿಸುವರು: "ಬರೀ ಕರ್ಮವೇ ನಿಮ್ಮ ಜೀವನದ ಗುರಿಯಲ್ಲ. ನೀವು ಆಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆಯಿರಿ. ಅನಂತರ ಮಾತ್ರ ನಿಮಗೆ ನಿಸ್ವಾರ್ಥವಾದ ಕರ್ಮವನ್ನು ಮಾಡಲು ಸಾಧ್ಯ."

**೨. ಎಲೆಗಳನ್ನು ಎಣಿಸಬೇಡಿ, ಹಣ್ಣನ್ನು ತಿನ್ನಿ:** ಒಣ ಪಂಡಿತರು ಮತ್ತು ಭಕ್ತರ ನಡುವಣ ವ್ಯತ್ಯಾಸವೇ ಇದು. ಪಂಡಿತನು ಅನವಶ್ಯಕವಾದ ವಿಷಯಗಳನ್ನು ತಿಳಿದುಕೊಳ್ಳಲು ಯತ್ನಿಸುವನು. ಸೃಷ್ಟಿ ಹೇಗಾಯಿತು, ಯಾವುದರಿಂದ ಆಯಿತು – ಇಂಥ ವಿಷಯಗಳಿಗೆ ಮನಸ್ಸು ಕೊಡುವನು. ಆದರೆ ದೀನನಾದ ಭಕ್ತನು ಸೃಷ್ಟಿಕರ್ತನೊಂದಿಗೆ ಸಂಬಂಧ ಇಟ್ಟುಕೊಳ್ಳಲು ಪ್ರಯತ್ನಿಸುವನು. ಇದನ್ನು ಒಂದು ಸ್ವಾರಸ್ಯಕರ ಉಪಮೆಯ ಮೂಲಕ ಶ್ರೀರಾಮಕೃಷ್ಣರು ವಿವರಿಸುತ್ತಾರೆ: ಇಬ್ಬರು ಸ್ನೇಹಿತರು ಮಾವಿನತೋಪಿಗೆ ಹೋದರು. ಅವರಲ್ಲಿ ವ್ಯವಹಾರಜ್ಞಾನವಿದ್ದವನು ಎಷ್ಟು ಮರಗಳಿವೆ, ಎಷ್ಟು ಮಾವಿನ ಹಣ್ಣುಗಳಿವೆ, ಎಷ್ಟು ಎಲೆಗಳಿವೆ ಎಂದು ಲೆಕ್ಕಾಚಾರ ಮಾಡಲು ಆರಂಭಿಸಿದನಂತೆ. ಇನ್ನೊಬ್ಬ ಮನುಷ್ಯ ತೋಟದ ಮಾಲಿಕನ ಹತ್ತಿರ ಸ್ನೇಹ ಬೆಳೆಸಿಕೊಂಡು, ಕೆಲವು ಹಣ್ಣುಗಳನ್ನು ತೆಗೆದುಕೊಂಡು ತಿನ್ನಲು ಆರಂಭಿಸಿದನಂತೆ. ಇವರಿಬ್ಬರಲ್ಲಿ ಯಾರು ಬುದ್ಧಿವಂತರು? ಶ್ರೀರಾಮಕೃಷ್ಣರು ಹೇಳುತ್ತಾರೆ, "ಮಾವಿನಹಣ್ಣನ್ನು ತಿಂದರೆ ಹಸಿವಿನಿಂದ ಪಾರಾಗುತ್ತೀಯೆ. ಬರೀ ಎಲೆ, ಮರ –ಇವುಗಳ ಲೆಕ್ಕಾಚಾರದಿಂದ ಏನು ಪ್ರಯೋಜನ?" ಎಂದು. ಈ ಜಗತ್ತಿಗೆ ಬಂದ ಮೇಲೆ ಸೃಷ್ಟಿಯ ವೈಚಿತ್ರ್ಯಗಳ ಬಗ್ಗೆಯೇ ವಿಚಾರ ಮಾಡುವ ಬದಲು, ಸೃಷ್ಟಿಕರ್ತನಾದ ಭಗವಂತನ ಸಾಕ್ಷಾತ್ಕಾರ ಪಡೆಯಲು ಯತ್ನಿಸಬೇಕು. ಇದೇ ಬದುಕಿಗೆ ಸಾರ್ಥಕತೆಯನ್ನು ತಂದುಕೊಡಬಲ್ಲುದು.

**೩. ನಿತ್ಯ, ಲೀಲೆ – ಎರಡನ್ನೂ ಒಪ್ಪಿಕೊಳ್ಳಿ:** ಸಾಧಕರನ್ನು ಬಹುವಾಗಿ ಕಾಡುವ ಇನ್ನೊಂದು ವಿಷಯವೆಂದರೆ ದ್ವೈತ–ಅದ್ವೈತಗಳ ವಿವಾದದ ವಿಚಾರ. ಇದು ಸಾಧಕನ ಮನಸ್ಸನ್ನು ಸಂದೇಹಕ್ಕೆ ಈಡುಮಾಡುತ್ತದೆ. ಈ ಅಪಾಯದಿಂದ ಪಾರಾಗುವುದು ಕೂಡ ಬಹಳ ಅವಶ್ಯಕ. ಹಾಗೆಂದೇ ನಿತ್ಯ, ಲೀಲೆ – ಎರಡನ್ನೂ ಒಪ್ಪಿಕೊಳ್ಳಿ ಎಂದು ಶ್ರೀರಾಮಕೃಷ್ಣರು ಕಿವಿಮಾತು ಹೇಳುತ್ತಾರೆ. ಅದ್ವೈತವು ನಿತ್ಯವನ್ನು ಪ್ರತಿಪಾದಿಸುತ್ತದೆ. ದ್ವೈತವು ಲೀಲೆಯ ಬಗ್ಗೆ ಹೇಳುತ್ತದೆ. ಇವೆರಡೂ ಒಪ್ಪತಕ್ಕದ್ದೇ ಎಂದು ಅವರ ಅಭಿಪ್ರಾಯ. ಇದಕ್ಕೆ ತಮಾಷೆಯಾದ ಕಥೆಯೊಂದನ್ನು ಅವರು ಹೇಳುತ್ತಿದ್ದರು: ಒಬ್ಬಳು ತನ್ನ ಸ್ನೇಹಿತೆಯನ್ನು ನೋಡಲು ಹೋದಳು. ಅವಳು ನೇಯ್ಗೆಯವಳು. ಹಲವು ಬಣ್ಣದ ರೇಷ್ಮೆದಾರವನ್ನು ಹೆಣೆಯುತ್ತಿದ್ದಳು. ತನ್ನ ಸ್ನೇಹಿತೆಯನ್ನು ನೋಡಿ ತುಂಬ ಖುಷಿ ಪಟ್ಟಳು. ತಿಂಡಿ ಮಾಡಲು ಮನೆಯ ಒಳಕ್ಕೆ ಹೋದಳು. ಆಗ ಹೊರಗಿನಿಂದ ಬಂದ ಹೆಂಗಸು ತನ್ನ ಕಂಕುಳಲ್ಲಿ ಒಂದು ದಾರದ ಉಂಡೆಯನ್ನು ಕದ್ದು ಮುಚ್ಚಿಟ್ಟುಕೊಂಡಳು. ನೇಯ್ಗೆಯವಳು ತಿಂಡಿತಂದು, ಉಪಚಾರ ಮಾಡಿದಳು. ಅವಳಿಗೆ ಕ್ರಮೇಣ ಗೊತ್ತಾಯಿತು, ತನ್ನ ಸ್ನೇಹಿತೆ ದಾರದ ಉಂಡೆಯನ್ನು ಕದ್ದು ಕಂಕುಳಲ್ಲಿ ಇಟ್ಟುಕೊಂಡಿದ್ದಾಳೆ ಎಂದು. ಅದನ್ನು ಹೊರತೆಗೆಯಲು ಅವಳು ಒಂದು ಉಪಾಯವನ್ನು ಹುಡುಕಿದಳು. "ಗೆಳತಿ, ನಿನ್ನನ್ನು ಕಂಡು ತುಂಬಾ ದಿನವಾಯಿತು. ನಾವಿಬ್ಬರೂ ನರ್ತನ ಮಾಡೋಣ" ಎಂದು ಕರೆದಳು. ಸ್ನೇಹಿತೆ ಕಂಕುಳಲ್ಲಿ ದಾರದ ಉಂಡೆಯನ್ನು ಇಟ್ಟುಕೊಂಡೇ ನರ್ತನ ಮಾಡಿದಳು. ನೇಯ್ಗೆಯವಳು, "ಈಗ ನಾವಿಬ್ಬರೂ ಎರಡೂ ಕೈಗಳನ್ನು ಎತ್ತಿಕೊಂಡು ಆನಂದದಿಂದ ಕುಣಿಯೋಣ" ಎಂದಳು. ಆದರೆ ಸ್ನೇಹಿತೆ ಒಂದೇ ಕೈಯನ್ನು ಎತ್ತಿಕೊಂಡು ಕುಣಿಯುತ್ತಿದ್ದಳು. "ತಂಗಿ, ನೀನು ಒಂದೇ ಕೈಯನ್ನು ಎತ್ತಿಕೊಂಡು ಕುಣಿಯುತ್ತಿದ್ದೀಯೆ. ನೋಡು, ನಾನು ಹೇಗೆ ಎರಡು ಕೈಗಳನ್ನೂ ಎತ್ತಿಕೊಂಡಿದ್ದೇನೆ. ನನ್ನನ್ನು ಅನುಸರಿಸು" ಎಂದು ನೇಯ್ಗೆಯವಳು ಹೇಳಿದಳು. ಇಷ್ಟಾದರೂ ಅವಳ ಗೆಳತಿ ಕೈಯನ್ನು ಮಡಿಸಿಕೊಂಡೇ ಕುಣಿಯುತ್ತಿದ್ದಳು. "ಅಕ್ಕಾ, ನನಗೆ ಕುಣಿಯುವುದರ ಬಗ್ಗೆ ಇಷ್ಟೇ ತಿಳಿದಿರುವುದು" ಎಂದಳು. ಸಂಕುಚಿತ ಬುದ್ಧಿಯವರು ಹಾಗೆಯೇ ಇರುತ್ತಾರೆ. ಅವರು